ಹಾಡ್ಯ ಜಯಾನಂದ, ಮೈಸೂರು

*ದೇವರ ಪ್ರಾರ್ಥನೆಗೆ ಕೆಲವರು ಧ್ವನಿವರ್ಧಕ ಹಾಕಿಕೊಳ್ಳುವ ಉದ್ದೇಶವೇನು?*



ಮೆಚ್ಚಿ ಬರದಿದ್ದರೂ ಬೆಚ್ಚಿ ಬರಲೆಂದು!

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ

*ಸತ್ವಪರೀಕ್ಷೆಗೂ, ಪ್ರೇಮಪರೀಕ್ಷೆಗೂ ಇರುವ ವ್ಯತ್ಯಾಸವೇನು ಶಿವಾ?*

ಸತ್ವಪರೀಕ್ಷೆಯಲ್ಲಿ ಮಾನ ಮುಖ್ಯ, ಪ್ರೇಮಪರೀಕ್ಷೆಯಲ್ಲಿ ಮಾವ ಮುಖ್ಯ!

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು

*ರಾಜಗುರುಗಳಿಗೂ, ರಾಜಕೀಯಗುರುಗಳಿಗೂ ಏನು ವ್ಯತ್ಯಾಸ?*

ರಾಜಗುರು ಗುರು, ರಾಜಕೀಯಗುರು ಕುರು!

ಸವಿರವಿ, ಕೊಪ್ಪ

*ಹಣೆಬರಹ ಬದಲಿಸಿ ಜೀವನ ಸರಿ ಮಾಡಲಾಗದಿದ್ದ ಮೇಲೆ ಆತ್ಮಹತ್ಯೆ ಅಪರಾಧ ಎಂದೇಕೆ ಹೇಳಬೇಕು?*

9 ಬಾರಿ ಸೋತ ಲಿಂಕನ್ ಅಮೆರಿಕದ ಪ್ರೆಸಿಡೆಂಟ್ ಆದರು. ಸೋಲಿಗೆ soul ಸೋಲದಿರುವುದು ಸೂಕ್ತ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

*ಬೆಳಿಗ್ಗೆ ಹೋಗುವಾಗ **Tata** ಅಂತಾಳೆ, ಸಂಜೆ ಬರ್ತಿದ್ದಾಗ ಏನೇ ತಾತಾ ಅಂತಾಳೆ. ಏನ್ಮಾಡಲಿ?*



ಬೆಳಗ್ಗೆ Tata ರಷ್ಟು ಶ್ರೀಮಂತರಾದವರು ಸಂಜೆಗೇ ಸೋತು ವಯಸ್ಸಾದಂತಾ ಗುತ್ತೀರೆಂದರೆ... ನೀವು ರೇಸ್ ಆಡುವುದನ್ನು ಬಿಡುವುದು ಉತ್ತಮ!

ಡಿ.ಎಲ್. ಶ್ವೇತಾ, ಚನ್ನಗಿರಿ

*ರಾಜಕೀಯ ಎಂದರೇನು?*

ರಾಜಕಾರಣಿಗಳು ಜನಹಿತವನ್ನು ಕೀಳುವ ಯಜ್ಞ!

ಪಿ.ಜಿ. ರಾಘವೇಂದ್ರ, ಮೈಸೂರು

*ರಾಜಕಾರಣಿಗಳು ತಮ್ಮ ಹೆಸರಿನ ಮುಂದೆ ಕ್ವಾಲಿಫಿಕೇಷನ್ ಏಕೆ ಹಾಕಿಕೊಳ್ಳುವುದಿಲ್ಲ?*

ಬಹಳ ಲಾಂಗ್ ಇರುವುದರಿಂದ ಸೂಕ್ತವಲ್ಲವೆಂದು!

ವಿಜಯ ನರಹರಿ, ಆಸುಂಡಿ

*ಗುರುವೇ, ದೇವಸ್ಥಾನಕ್ಕೆ ಬರುವ ಭಕ್ತರೆಲ್ಲ ಘಂಟೆ ಬಾರಿಸಲೇಬೇಕಾ?*

ಹಾಗೇನಿಲ್ಲ; ಚಪ್ಪಲಿ ಕಳೆದುಕೊಂಡವರು ಶಂಖ ಹೊಡೆಯಲೂಬಹುದು.

ಮಹಾಲಿಂಗ ಎಂ. ಗೋರಬಾಳ, ಮಾಣಿಕವಾಡಿ

*ಟಿವಿ ಮೊಬೈಲ್ ಇಲ್ಲದ ಮನೆಯ ವಿಳಾಸ ಹೇಳಬಲ್ಲಿರಾ?*

ಏಕೆ? ನೀವು ಟಿವಿ ಮತ್ತು ಮೊಬೈಲ್ ಮಾರಾಟಗಾರರೇನು?

ಎಚ್.ಆರ್. ದೇಸಾಯಿ, ರಾಯಚೂರು

*ನಮಗೆ ಸಾವೇ ಇರಬಾರದಿತ್ತು, ಮುಂದಿನ ಪೀಳಿಗೆಗೆ ಜನ್ಮ ಕೊಡುವ ಶಕ್ತಿಯೇ ಇರಬಾರದಿತ್ತು. ಹೀಗಾಗಿದ್ದರೆ ಹೇಗಾಗುತ್ತಿತ್ತು?*

ಹೆರಿಗೆ ಆಸ್ಪತ್ರೆಗಳ ಜಾಗದಲ್ಲಿ ಕಮರ್ಷಿಯಲ್ ಕಾಂಪ್ಲೆಕ್ಸ್, ಸ್ಮಶಾನಗಳ ಜಾಗದಲ್ಲಿ ಲೇಔಟ್‌ಗಳು ಇರುತ್ತಿದ್ದವು!

ಎಸ್. ಶಿವಶಂಕರ್, ಚಿಕ್ಕಲಸಂದ್ರ

*ಇದೇ ತಿಂಗಳು ನನ್ನ ಮದುವೆಯ ದಿನ ಮತ್ತು ಹುಟ್ಟಿದ ದಿನ ಬರುತ್ತವೆ. ಈ ಸಂಭ್ರಮವನ್ನು ಹೇಗೆ ಆಚರಿಸಲಿ?*

ಮದುವೆಯ ದಿನವನ್ನು ಮರೆತುಬಿಡಿ, ಹೆಂಡತಿಯೇ ಸರಿಯಾಗಿ ಹುಟ್ಟಿದ ಹಬ್ಬ ಮಾಡುತ್ತಾಳೆ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಕಣ್ಣು, ಕಿವಿ, ಕೈ, ಕಾಲು ಎರಡೆರಡು ಕೊಟ್ಟ ದೇವ ಹೃದಯ ಒಂದೇ ನೀಡಿರುವನಲ್ಲಾ, ಏಕೆ?*

ಕಿಡ್ನಿ ಕದ್ದಂತೆ ಹೃದಯವನ್ನೂ ಕದಿಯದಿರಲೆಂದು!

ಪದ್ಮಾ ಎಂ.ವಿ, ಬೆಂಗಳೂರು

*ಆತ್ಮಕ್ಕೆ ಸಾವು, ನೋವು ಇಲ್ಲವಾದರೂ ಆತ್ಮಕ್ಕೆ ಶಾಂತಿ ಸಿಗಲಿ ಎನ್ನುವುದೇಕೆ?*

ಕಡೆಯ ದಿನಗಳಲ್ಲಿ ಆತ್ಮ ವೈದ್ಯರ ಕೈಯಲ್ಲಿ ಸಿಲುಕಿ ಇರಲೂ ಆಗದೆ, ಹೋಗಲೂ ಆಗದೆ ವಿಲಿವಿಲಿ ಒದ್ದಾಡಿರುತ್ತದಂತೆ!

ಮಲ್ಲೇಶ ಕೆ, ಕೊಡಸೋಗೆ

*ಕೆಲವು ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ನಕಲಿ ಮಾಡಿದರೂ ಫೇಲ್ ಆಗುತ್ತಾರಲ್ಲಾ, ಅವರಿಗೆ ಏನೆನ್ನಬೇಕು?*

ದಡ್ಡ! ಹಾಲ್ ಟಿಕೆಟ್ ನಂಬರ್ರೂ ಯಾರಾದ್ರೂ ಕಾಪಿ ಮಾಡ್ತಾರೇನೋ...!

## ಬಹುಮಾನಿತ ಪ್ರಶ್ನೆ

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಬೇಸತ್ತ ರಾಜಕಾರಣಿಯೊಬ್ಬ ಆತ್ಮಹತ್ಯೆ ಮಾಡಿಕೊಂಡ ಪ್ರಸಂಗ ಉಂಟೆ?*

ಹುಚ್ಚಪ್ಪ! ಭಾವನೆಗಳು ಸತ್ತವನಿಂದ ಬೇಸತ್ತ ಪ್ರಸಂಗ ದೂರ!

ಜಿ.ಕಾಂತರಾಜು, ಗೌರಿಬಿದನೂರು

*ಮದುವೆಗಳೆಲ್ಲಾ ಸ್ವರ್ಗದಲ್ಲಿ ಆಗುತ್ತವಂತೆ. ಆದರೆ ಡೈವರ್ಸ್‌ಗಳೇಕೆ ಕೋರ್ಟಿನಲ್ಲಿ?*

ಏನು ಮಾಡುವುದು, ಸ್ವರ್ಗದಲ್ಲಿ ವಕೀಲರು ಇರುವುದಿಲ್ಲವಲ್ಲ!

ಹೇಮಾವತಿ ಜೈನ್, ಹೂವಿನ ಹಡಗಲಿ

*ಬೆಳದಿಂಗಳಿನಲ್ಲೇಕೆ ಕವಿಗಳು ಕವಿತೆ ಕುಡಿಯುತ್ತಾರೆ ಸ್ವಾ...?*

ಕವಿಗೆ ಕವಿತೆಯೇ ನಶೆ, ಬೆಳದಿಂಗಳೇ ಕಿಕ್ ಅಂತೆ!

ಹೆಚ್.ಎಂ.ಅನಂತಪದ್ಮನಾಭ, ಮೈಸೂರು

*ಹೆಂಡಕ್ಕೂ, ಹೆಂಡತಿಗೂ ಇರುವ ವ್ಯತ್ಯಾಸವೇನು?*



ಹೆಂಡ ಒಮ್ಮೆ ಮಾತ್ರ ಕಿಕ್ ಕೊಡುತ್ತದೆ, ಹೆಂಡತಿ ಆಗಾಗ್ಗೆ ಕಿಕ್ ಕೊಡುತ್ತಾಳೆ.

ಕಾಳೀಹುಂಡಿ ಕೆ.ವಿ.ಶಿವಕುಮಾರ್, ಮೈಸೂರು

*ಭ್ರಷ್ಟತೆ ಮತ್ತು ವಚನಭ್ರಷ್ಟತೆಗಳಲ್ಲಿ ಯಾವುದು ಮೇಲು?*

ವಕೀಲಭ್ರಷ್ಟತೆಗೆ ಹೋಲಿಸಿದರೆ ಇವೆರಡೂ ಭ್ರಷ್ಟತೆಯೇ ಅಲ್ಲ ಬಿಡಿ!

ಪದ್ಮಾ ಕೃಷ್ಣಮೂರ್ತಿ, ತುಮಕೂರು

*ಕನ್ನಡ ಶಾಲೆ ಮುಚ್ಚಬೇಡಿ ಎಂದು ಅಬ್ಬರಿಸುವವರು ತಮ್ಮ ಮಕ್ಕಳು, ಮೊಮ್ಮಕ್ಕಳನ್ನು ಇಂಗ್ಲಿಷ್ ಶಾಲೆಗೆ ಸೇರಿಸುತ್ತಾರಲ್ಲಾ...?*

ರನ್ನ ಇರಲಿ ಪರರಿಗೆ, ರೆನ್ ಮಾರ್ಟಿನ್ ನಮಗೆ ಎಂಬುದೇ ಅವರ ಸಿದ್ಧಾಂತವಂತೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಬೀಚಿ, ನವರತ್ನರಾಂ, ರಾಜರತ್ನಂರಿಗೂ, ನಿಮಗೂ ಇರುವ ವ್ಯತ್ಯಾಸವೇನು?*

ಅವರೆಲ್ಲಾ ದೇಹಾಂತ್ಯವಾದರೂ ತಮ್ಮ ಕೃತಿಗಳಿಂದ ಚಿರಂಜೀವಿಗಳು. ನೀನು...ಛಿ! ರಂ ಜೀವಿ! ಎಂದ ನನ್ನ ಗೆಳೆಯ!

■ ರಾಮ್